**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 26/2022**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಕೇಶವಾಚಾರಿ | ಸಿ.ಡಬ್ಲ್ಯೂ-1 |
| ತಂದೆ ಹೆಸರು | : | ಮಲ್ಲಿಕಾರ್ಜುನಚಾರಿ | ಪಿ.ಡಬ್ಲ್ಯೂ-1 |
| ವಯಸ್ಸು | : | 48 ವರ್ಷ | |
| ಉದ್ಯೋಗ | : | ಗ್ರಾಮ ಲೆಕ್ಕಿಗ | |
| ವಾಸಸ್ಥಳ | : | ಚಳ್ಳಕೆರೆ | ದಿಃ 25-09-2025. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ಸುಮಾರು 4 ವರ್ಷಗಳ ಹಿಂದೆ ಚಾಸಾ-3 ರವರು ಗಾಂಜಾ ವಿಚಾರವಾಗಿ ನನ್ನನ್ನು ಹಾಗೂ ಚಾಸಾ-2 ರವರನ್ನು ಚಳ್ಳಕೆರೆ ಟೌನ್ ನ ವಾಲ್ಮಿಕಿ ನಗರಕ್ಕೆ ಗಾಂಜಾ ಪ್ರಕರಣದಲ್ಲಿ ಸಾಕ್ಷಿದಾರರಾಗಲು ಕರೆದುಕೊಂಡು ಹೋಗಿದ್ದರು. ಸದರಿ ಸ್ಥಳದಲ್ಲಿ ಒಂದು ಡಬ್ಬ ಅಂಗಡಿಯ ಹತ್ತಿರ ಬೆಳಿಗ್ಗೆ 10-30 ರಿಂದ 11-00 ಗಂಟೆ ಸಮಯದಲ್ಲಿ ಒಬ್ಬ ಆಸಾಮಿಯು ಸಿಕ್ಕಿದ್ದು, ಆತನ ಬಳಿ ಗಾಂಜಾ ಇರುತ್ತದೆ ಎಂದು ಚಾಸಾ-11 ರವರು ದಸ್ತಗಿರಿ ಮಾಡಿರುತ್ತಾರೆ. ಪಂಚನಾಮೆ ಕ್ರಮ ಜರುಗಿಸಿ ಭಾವಚಿತ್ರವನ್ನು ತಗೆಯಲಾಗಿರುತ್ತದೆ. ಪಂಚನಾಮೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ.

ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿಃ1 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಅಂತ ಗುರುತಿಸಲಾಯಿತು.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತಾನು ಇರುವುದನ್ನು ನೋಡಿ ಮಹಜರ್ ಸಮಯದಲ್ಲಿ ತೆಗೆದ ಭಾವಚಿತ್ರ ಎಂದು ಗುರುತಿಸಿರುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ.2 ಅಂತ ಗುರುತಿಸಲಾಯಿತು. ಸಿಡಿಯನ್ನು ನಿಪಿ.3 ಅಂತ ಹಾಗೂ ಸಿಡಿಗೆ ಲಗತ್ತಾಗಿರುವ ಪ್ರಮಾಣ ಪತ್ರವನ್ನು ನಿಪಿ.4 ಅಂತ ಗುರುತಿಸಲಾಯಿತು.

ಬಹಳ ವರ್ಷಗಳಾಗಿರುವ ಕಾರಣ ಸ್ಥಳದಲ್ಲಿ ನೋಡಿದ ಆಸಾಮಿಯನ್ನು ಗುರುತಿಸಲು ಆಗುವುದಿಲ್ಲ.

**( ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ**

ದಿನಾಂಕ 26.04.2021 ರಂದು ಚಾಸಾ–3 ರವರು ನನಗೆ ಹಾಗೂ ಚಾಸಾ–2 ರವರಿಗೆ ಪಂಚರಾಗಿ ಹಾಜರಿರಲು ತಿಳಿಸಿದ್ದರು ಎಂದರೆ ಸರಿ. ನಮ್ಮ ಜೊತೆಗೆ ಚಾಸಾ–7 ರವರ ಮುಖಾಂತರ ತೂಕದ ಯಂತ್ರವನ್ನು ತರಿಸಿದ್ದರು ಎಂದರೆ ಸರಿ. ಬೆಳಿಗ್ಗೆ 10.15 ಗಂಟೆಗೆ ಚಳ್ಳಕೆರೆ ಪೊಲೀಸ್ ಠಾಣೆಗೆ ಹೋಗಿರುತ್ತೇವೆ ಎಂದರೆ ಸರಿ. ನಂತರ ಠಾಣೆಯಿಂದ ಇಲಾಖಾ ವಾಹನದಲ್ಲಿ ಜಾಫರ್ ಷರೀಫ್ ಲೇ ಔಟ್ ಕಡೆಗೆ ಹೋಗುವ ತಿಪ್ಪೇಸ್ವಾಮಿ ರವರ ಜಮೀನಿನ ಮುಂಭಾಗದ ಸಾರ್ವಜನಿಕ ರಸ್ತೆಯ ಪಕ್ಕದಲ್ಲಿರುವ ಡಬ್ಬದ ಅಂಗಡಿಯ ಹತ್ತಿರ ಹೋಗಿರುತ್ತೇವೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಒಬ್ಬ ವ್ಯಕ್ತಿಯು ನಿಂತಿದ್ದು , ಕೈಯಲ್ಲಿ ಬಟ್ಟೆ ಚೀಲವನ್ನು ಹಿಡಿದುಕೊಂಡಿದ್ದು, ಆತನ ಸುತ್ತ ಕೆಲವು ಜನರು ನಿಂತಿದ್ದರು ಎಂದರೆ ಸರಿ. ನಮ್ಮನ್ನು ನೋಡಿ ಸಾರ್ವಜನಿಕರು ಓಡಿ ಹೋದರು ಎಂದರೆ ಸಾಕ್ಷಿಯು ಸ್ವಲ್ಪ ಜನ ನಿಂತಿದ್ದರು ಎಂದು ನುಡಿಯುತ್ತಾರೆ. ಸ್ಥಳದಲ್ಲಿ ನಿಂತಿದ್ದ ಇಬ್ಬರು ಆಸಾಮಿಗಳನ್ನು ಹಿಡಿದುಕೊಂಡಿರುತ್ತೇವೆ ಎಂದರೆ ಸರಿ. ಚಾಸಾ–3 ರವರು ಸ್ಥಳದಲ್ಲಿ ನಿಂತಿದ್ದ ವ್ಯಕ್ತಿಯ ಹೆಸರನ್ನು ಕೇಳಲಾಗಿ ಶಾಹೀದ್ ಅಫ್ರಿದಿ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಆತನ ಜೊತೆ ಇದ್ದ ಇನ್ನೊಬ್ಬ ವ್ಯಕ್ತಿಯ ಹೆಸರು ರವಿಕುಮಾರ್ ಎಂದು ತಿಳಿಸಿರುತ್ತಾರೆ ಎಂದರೆ ಸರಿ.

1 ನೇ ಆರೋಪಿಗೆ ಬಟ್ಟೆ ಚೀಲದಲ್ಲಿ ಏನು ಇದೆ ಎಂದು ಕೇಳಿದಾಗ ಗಾಂಜಾ ಸೊಪ್ಪು ಇರುತ್ತದೆ ಎಂದು ಉತ್ತರಿಸಿರುತ್ತಾನೆ. ಏತಕ್ಕಾಗಿ ಅದನ್ನು ಇಟ್ಟುಕೊಂಡಿದ್ದೀಯಾ ಎಂದಾಗ ತಾನು ಮತ್ತು 2 ನೇ ಆರೋಪಿಯು ಮಾರಾಟ ಮಾಡುವುದಕ್ಕಾಗಿ ಇಟ್ಟುಕೊಂಡಿರುವುದಾಗಿ ತಿಳಿಸಿದರು ಎಂದರೆ ಸರಿ. 1 ನೇ ಆರೋಪಿಯನ್ನು ಪೊಲೀಸರು ಅಥವಾ ಚಾಸಾ–3 ರವರು ಅಂಗ ಶೋಧಿಸಲು ಹೇಳಿದಾಗ, ಆತ ಚಾಸಾ–3 ರವರೇ ಅಂಗ ಶೋಧನೆ ಮಾಡಲೀ ಎಂದು ಹೇಳಿರುತ್ತಾನೆ. ಆಗ ಚಾಸಾ–3 ರವರು ಆರೋಪಿಯ ಕೈಯಲ್ಲಿದ್ದ ಬಟ್ಟೆ ಚೀಲವನ್ನು ಪರಿಶೀಲಿಸಿ ನೋಡಲಾಗಿ 4 ಪ್ಲಾಸ್ಟಿಕ್ ಕವರಿನಲ್ಲಿ ಸೊಪ್ಪು ಮತ್ತು ಬೀಜ ಇರುವ ಗಾಂಜಾ ಕಂಡು ಬಂದಿರುತ್ತದೆ ಎಂದರೆ ಸರಿ. ಸದರಿ 4 ಕವರ್ ನಲ್ಲಿ ಒಂದು ಪ್ಲಾಸ್ಟಿಕ್ ಕವರನ್ನು ಪರಿಶೀಲಿಸಿದಾಗ ಅದರಲ್ಲಿ ಗಾಂಜಾ ಸೊಪ್ಪಿನ ಗಾಟು ವಾಸನೆ ಬರುತ್ತಿತ್ತು ಎಂದರೆ ಸರಿ. ಸದರಿ ಕವರಿನಲ್ಲಿ 1, 2 , 3 ಇಂಚಿನ ಉದ್ದದಷ್ಟು ಗಾಂಜಾ ಸೊಪ್ಪುಗಳು ಇದ್ದವು ಎಂದರೆ ಸರಿ. ಸದರಿ ಗಾಂಜಾವನ್ನು ಚಾಸಾ–7 ರವರು ತೂಕದ ಯಂತ್ರದಿಂದ ತೂಕ ಮಾಡಿರುತ್ತಾರೆ ಎಂದರೆ ಸರಿ. ಮೊದಲನೇ ಪ್ಲಾಸ್ಟಿಕ್ ಕವರಿನಲ್ಲಿ 123 ಗ್ರಾಂ ತೂಕದ ಗಾಂಜಾ ಇತ್ತು ಎಂದರೆ ಸರಿ.

2 ನೇ ಕವರನ್ನು ಪರಿಶೀಲಿಸಿದಾಗ ಗಾಟು ವಾಸನೆ ಬರುತ್ತಿದ್ದು , ಅದರಲ್ಲಿ ಸೊಪ್ಪು ಮತ್ತು ಬೀಜ ಇರುವ ಗಾಂಜಾ ಕಂಡು ಬಂದಿರುತ್ತದೆ ಎಂದರೆ ಸರಿ. ಸದರಿ ಕವರನ್ನು ಚಾಸಾ–7 ರವರು ತೂಕದ ಯಂತ್ರದಿಂದ ತೂಕ ಮಾಡಿದಾಗ 25 ಗ್ರಾಂ ತೂಕ ಇತ್ತು ಎಂದರೆ ಸರಿ.

3 ನೇ ಕವರನ್ನು ಪರಿಶೀಲಿಸಿದಾಗ ಗಾಟು ವಾಸನೆ ಬರುತ್ತಿದ್ದು, ಅದರಲ್ಲಿ ಗಾಂಜಾ ಸೊಪ್ಪು ತುಂಬಿದ 9 ಚಿಕ್ಕ ಚಿಕ್ಕ ಪ್ಯಾಕೇಟ್ ಗಳು ಇದ್ದವು ಎಂದರೆ ಸರಿ. ಸದರಿ ಕವರಿನಲ್ಲಿ 1, 2,3 ಇಂಚಿನಷ್ಟು ಉದ್ದದ ಗಾಂಜಾ ಸೊಪ್ಪು ಇದ್ದವು ಎಂದರೆ ಸರಿ. ಸದರಿ ಕವರನ್ನು ಚಾಸಾ–7 ರವರು ತೂಕದ ಯಂತ್ರದಿಂದ ತೂಕ ಮಾಡಿದಾಗ 35 ಗ್ರಾಂ ತೂಕ ಇತ್ತು ಎಂದರೆ ಸರಿ.

4 ನೇ ಕವರನ್ನು ಪರಿಶೀಲಿಸಿದಾಗ ಗಾಟು ವಾಸನೆ ಬರುತ್ತಿದ್ದು, ಅದರಲ್ಲಿ ಗಾಂಜಾ ಸೊಪ್ಪು ಮತ್ತು ಪುಡಿ ಮಿಶ್ರಿತ ಬೀಜಗಳು ಕಂಡು ಬಂದಿರುತ್ತದೆ ಎಂದರೆ ಸರಿ. ಸದರಿ ಕವರನ್ನು ಚಾಸಾ–7 ರವರು ತೂಕದ ಯಂತ್ರದಿಂದ ತೂಕ ಮಾಡಿದಾಗ 17 ಗ್ರಾಂ ತೂಕ ಇತ್ತು ಎಂದರೆ ಸರಿ.

ನಾಲ್ಕು ಪ್ಲಾಸ್ಟಿಕ್ ಕವರಿನಲ್ಲಿದ್ದ ಗಾಂಜಾಗಳ ಒಟ್ಟು ತೂಕ 200 ಗ್ರಾಂ ಇತ್ತು ಎಂದರೆ ಸರಿ. ಪೊಲೀಸರು ಗಾಂಜಾ ತುಂಬಿದ ನಾಲ್ಕು ಪ್ಲಾಸ್ಟಿಕ್ ಕವರ್ ಗಳು ಹಾಗೂ ಬಟ್ಟೆಯ ಚೀಲವನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

ಬೆಳಿಗ್ಗೆ 11–10 ರಿಂದ 12.40 ರವರೆಗೆ ಮಹಜರ್ ಕ್ರಮ ಜರುಗಿಸಿ ನನ್ನ ಹಾಗೂ ಚಾಸಾ–2 ರವರ ಸಹಿಗಳನ್ನು ಪಡೆದಿರುತ್ತಾರೆ ಎಂದರೆ ಸರಿ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಜಪ್ತು ಪಡಿಸಿಕೊಂಡ ನಾಲ್ಕು ಗಾಂಜಾ ಪ್ಯಾಕೇಟ್ ಗಳನ್ನು ನೋಡಿ ಗುರುತಿಸಿದ ಮೇರೆಗೆ , ಸದರಿ ಪ್ಯಾಕೇಟ್ ಗಳನ್ನು ಮು.ಮಾ –1 ರಿಂದ 4 ಅಂತ ಗುರುತಿಸಲಾಯಿತು. ಆರೋಪಿಯು ಗಾಂಜಾದ ಪ್ಯಾಕೇಟುಗಳನ್ನು ತುಂಬಿದ್ದ ಬಟ್ಟೆ

ಚೀಲವನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ , ಸದರಿ ಬಟ್ಟೆ ಚೀಲವನ್ನು ಮೂ.ಮಾ–5 ಅಂತ ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯು ದಾಳಿ ಸಮಯದಲ್ಲಿ ಓಡಿ ಹೋದ ವ್ಯಕ್ತಿ ಎಂದರೆ ಸಾಕ್ಷಿಯು ಬಹಳ ದಿನಗಳಾಗಿರುವುದರಿಂದ ಗುರುತಿಸಲು ಆಗುವುದಿಲ್ಲ ಎಜಂದು ನುಡಿಯುತ್ತಾರೆ. ಬಹಳ ವರ್ಷಗಳಾಗಿರುವುದರಿಂದ 1 ನೇ ಆರೋಪಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ . ಆರೋಪಿತರನ್ನು ನೋಡಿದ್ದರೂ ಸಹಾ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನ್ಯಾಯಾಲಯದ ಕಾಲವಕಾಶ ಮುಗಿದ ಕಾರಣ ಆರೋಪಿ ಪರ ಪಾಟೀ ಸವಾಲನ್ನು ಮದ್ಯಾಹ್ನಕ್ಕೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ